ಗಮನ ಸೆಳೆಯುವ ಸೂಚನೆ

೧) ಮೈಸೂರಿನಲ್ಲಿ ಪುಟ್‌ಪಾತ್ ಹಾಗೂ ಉದ್ಯಾನವನಗಳ ಮೇಲೆ ಅನಧಿಕೃತವಾಗಿ ನಿರ್ಮಾಣ ಮಾಡಿರುವ ಹಣ್ಣಿನ ಮತ್ತು ತರಕಾರಿ ಮಳಿಗೆಗಳು

ಶ್ರೀ ಎಂ. ವೀರಪ್ಪ ಮೊಯಿಲಿ.— ಅಧ್ಯಕ್ಷರೆ, ಮೈಸೂರಿನಲ್ಲಿ ಪುಟ್‌ಪಾತ್ ಹಾಗೂ ಉದ್ಯಾನವನಗಳ ಮೇಲೆ ಅನಧಿಕೃತವಾಗಿ ನಿರ್ಮಾಣ ಮಾಡಿದ್ದ ಹಣ್ಣು ಮತ್ತು ತರಕಾರಿಗಳ ಮಳಿಗೆಗಳನ್ನು ಉದ್ಘಾಟಿಸಿರುವ ವಿಷಯದ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).— ಅಧ್ಯಕ್ಷರೇ, ತೋಟದ ಬೆಂಗಾವರರ ಸಹಕಾರಿ ಮಾರಾಟ ಸಂಸ್ಕರಣ ಸಂಘ ನಿಯಮಿತ, ಲಾಲ್‌ಬಾಗ್, ಬೆಂಗಳೂರು, ಇವರು ಮೈಸೂರು ಮಹಾ ನಗರ ಪಾಲಿಕೆಗೆ ದಿನಾಂಕ ೪-೬-೧೯೮೨ರಂದು ೨.೧೯೨೦ ಅಕ್ಷ-೮೭೬ನೇ ಸಂಖ್ಯೆಯ ಪತ್ರ ಬರೆದು ಮೈಸೂರು ನಗರದ ಬಡಾವಣೆಗಳಲ್ಲಿ ಹಣ್ಣು ಮತ್ತು ತರಕಾರಿ ಮಾರಾಟ ಮಳಿಗೆಗಳನ್ನು ನಿರ್ಮಿಸುವ ಬಗ್ಗೆ ೨೦ ಅಡಿX೧೨ ಅಡಿ ಅಳತೆಯ ಖಾಲಿ ಜಾಗಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಬೇಕೆಂದು ಕೋರಿರುತ್ತಾರೆ. ಅದರಂತೆ ಮೈಸೂರು ನಗರ ಪಾಲಿಕೆಯು ತೋಟಗಾರಿಕೆ ಸಂಘದವರು ಕೇಳಿರುವ ಸ್ಥಳಗಳ ಪೈಕಿ ಈ ಕೆಳಕಂಡ ಸ್ಥಳಗಳಲ್ಲಿ ಮಳಿಗೆಗಳನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಕಟ್ಟಲು ನಗರ ಪಾಲಿಕೆಯ ನಿರ್ಣಯದ ಸಂಖ್ಯೆ. ಪಿಸಿ/೧೨೨ ದಿನಾಂಕ ೧೩-೮-೧೯೮೨ರಂದು ಈ ಕೆಳಕಂಡ ಸ್ಥಳಗಳಲ್ಲಿ ಮಳಿಗೆಗಳನ್ನು ಕಟ್ಟಲು ಅನುಮತಿ ನೀಡಿರುತ್ತದೆ.

ಕ್ರಮ ಸಂಖ್ಯೆ	ಸ್ಥಳದ ವಿವರ	ನಿವೇಶನದ ಅಳತೆ
೧	೨	೩
೧.	ಜಯನಗರ ೩ನೇ ಮೇನ್, ೪ನೇ ಕ್ರಾಸ್‌ನಲ್ಲಿ	೨೦ ಅಡಿ X ೧೨ ಅಡಿ
೨.	ಅಶೋಕಪುರಂ ಅಂಬೇಡ್ಕರ್ ಪಾರ್ಕ್ ಹಿಂಬಾಗದಲ್ಲಿ	೨೦ ಅಡಿ X ೧೨ ಅಡಿ
೩.	ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿರುವ ಅಂಡರ್ ಬ್ರಿಡ್ಜ್ ಹತ್ತಿರ ಟೆನ್ನಿಸ್ ಕ್ಲಬ್‌ನ ದಕ್ಷಿಣಕ್ಕೆ	೨೦ ಅಡಿ X ೨೦ ಅಡಿ
೪.	ಪಾಣಿವಿಲಾಸ್ ರಸ್ತೆಯಲ್ಲಿರುವ ನೀರಿನ ಜೋಡಿ ಟ್ಯಾಂಕ್‌ನ ಕೆಳಭಾಗದಲ್ಲಿ	—
೫.	ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಶ್ರೀ ರಾಘವೇಂದ್ರ ಸ್ವಾಮಿ ದೇವಸ್ಥಾನದ ಪಕ್ಕದಲ್ಲಿ	೨೦ ಅಡಿ X ೧೨ ಅಡಿ
೬.	ಸೂಯೇಜ್ ಫಾರಂ ರಸ್ತೆಯಲ್ಲಿ ಸೂಯೇಜ್ ಫಾರಂ ಹತ್ತಿರ	೨೦ ಅಡಿ X ೧೨ ಅಡಿ
೭.	ವಿದ್ಯಾರಣ್ಯಪುರಂ ೨ನೇ ಮೇನ್‌ನಲ್ಲಿ ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದ ಹತ್ತಿರ	೧೨ ಅಡಿ X ೨೦ ಅಡಿ
೮.	ಚಾಮುಂಡಿಪುರಂನಲ್ಲಿ ಶಂಕರನಾರಾಯಣಸ್ವಾಮಿ ದೇವಸ್ಥಾನದ ಹತ್ತಿರ	೧೨ ಅಡಿ X ೨೦ ಅಡಿ
೯.	ವಿದ್ಯಾರಣ್ಯಪುರಂ ೨ನೇ ಕ್ರಾಸ್ (ಹೊಸ ಇಟ್ಟಿಗೆ ಗೂಡು) ಎನ್.ಐ.ಇ. ಕಾಲೇಜ್ ರಸ್ತೆಯಲ್ಲಿ (ಹೈಲ್ಯಾಂಡ್)	೧೨ ಅಡಿ X ೨೦ ಅಡಿ
೧೦.	ಗಣೇಶ ದೇವಸ್ಥಾನದ ಬಳಿ ಲೋಕರಂಜನ್ ಮಹಲ್ ರಸ್ತೆ	೧೨ ಅಡಿ X ೨೦ ಅಡಿ
೧೧.	ಬಲ್ಲಾಳ್ ಸರ್ಕಲ್ ಎದುರಿಗೆ ಇರುವ ಪಾರ್ಕ್ ಬಳಿ	೧೨ ಅಡಿ X ೨೦ ಅಡಿ

೧	೨	೩
೧೨.	ಬೃಂದಾವನ ಬಡಾವಣೆಯಲ್ಲಿ (ಪಿ.ಕೆ.ಸ್ಯಾನಿಟೋರಿಯಂ ಹತ್ತಿರ)	೧೨ ಅಡಿ X ೨೦ ಅಡಿ
೧೩.	ಹೈದರ್ ಗಂಟಾ ಪಾರ್ಕ್ ಬಳಿ	೧೨ ಅಡಿ X ೨೦ ಅಡಿ
೧೪.	ಪಾಣಿವಿಲಾಸ್ ಮಾರ್ಕೆಟ್ ಜಟಕಾ ನಿಲ್ದಾಣದ ಹತ್ತಿರ	೧೨ ಅಡಿ X ೨೦ ಅಡಿ
೧೫.	ಕೃಷ್ಣ ರೈಸ್ ಮಿಲ್ ಬಳಿ, ಚಾಮರಾಜ ಜೋಡಿ ರಸ್ತೆಯಲ್ಲಿ	೧೨ ಅಡಿ X ೨೦ ಅಡಿ
೧೬.	ಕೆ. ಆರ್. ಆಸ್ಪತ್ರೆ ಪಕ್ಕದಲ್ಲಿರುವ ಕೆ.ಎಂ.ಎಫ್. ಡೈರಿ ಪಕ್ಕದಲ್ಲಿ	೧೨ ಅಡಿ X ೨೦ ಅಡಿ
೧೭.	ಜಯಲಕ್ಷ್ಮಿ ಸ್ಪೋರ್ಟ್ಸ್ ಬಳಿ ಜಯನಗರ	೧೨ ಅಡಿ X ೨೦ ಅಡಿ

ಸದರಿ ಮೇಲಿನ ೧೭ ಸ್ಥಳಗಳ ಪೈಕಿ ೨ ಸಾರ್ವಜನಿಕ ಮತ್ತು ನಗರ ಪಾಲಿಕೆಯ ಅಧೀನದಲ್ಲಿರುವ ಸ್ಥಳಗಳಲ್ಲಿ ಎಂದರೆ ಕೃಷ್ಣ ರೈಸ್‌ಮಿಲ್ ಬಳಿ, ಚಾಮರಾಜ ಜೋಡಿ ರಸ್ತೆಯಲ್ಲಿನ ಪುಟ್‌ಪಾತ್‌ಗಳ ವಿಶಾಲತೆಯಿಂದ ೧೦ ಅಡಿ ಬಿಟ್ಟು ಮತ್ತು ಬಲ್ಲಾಳ್ ಸರ್ಕಲ್ ಎದುರಿಗೆ ಇರುವ ಪಾರ್ಕ್ ಬಳಿ ಚಾಮರಾಜ ಮೊಹಲ್ಲಾ ಕಛೇರಿ ಮುಂಭಾಗದಲ್ಲಿ ತೋಟಗಾರಿಕೆಯ ಸಂಘದವರು ಮಳಿಗೆ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಆ ಕಟ್ಟಡಗಳನ್ನು ೯-೩-೧೯೮೮ರಂದು ಉದ್ಘಾಟಿಸಲಾಯಿತು.

ಸದರಿ ಸ್ಥಳಗಳಲ್ಲಿ ಮಳಿಗೆಗಳನ್ನು ಕಟ್ಟಲು ಅನುಮತಿ ನೀಡುವ ವಿಷಯವನ್ನು ಕಾಮಗಾರಿಸ್ಥಾಯಿ ಸಮಿತಿಯಿಂದ ಸ್ಥಳ ಪರಿಶೀಲಿಸಲ್ಪಟ್ಟ ನಂತರ ಕಾರ್ಯಪಾಲಕ ಅಭಿಯಂತರರು ಮಳಿಗೆಗಳ ನಕ್ಷೆಗಳನ್ನು ತಯಾರಿಸಿ, ಸದರಿ ಸ್ಥಳಗಳಲ್ಲಿ ಮಳಿಗೆಗಳನ್ನು ಸಾರ್ವಜನಿಕರ ಉಪಯೋಗಕ್ಕೆ ಕಟ್ಟಲು ಅನುಮತಿ ನೀಡಬಹುದೆಂದು ಅಭಿಪ್ರಾಯ ನೀಡಿರುವುದನ್ನು ಪರಿಗಣಿಸಿ ನಗರ ಪಾಲಿಕೆಯು ದಿನಾಂಕ ೧೩-೮-೧೯೮೭ ರಂದು ಕ್ರಮ ಸಂಖ್ಯೆ ೫೩/೧೨೨ರಲ್ಲಿ ಸದರಿ ಮಳಿಗೆಗಳನ್ನು ನಿರ್ಮಾಣ ಮಾಡುವ ಬಗ್ಗೆ ಒಪ್ಪಿಗೆ ನೀಡಿ ೫ ವರ್ಷಗಳಿಗೆ ಚದರಡಿಯಂದಕ್ಕೆ ತಿಂಗಳಿಗೆ ೧-೦೦ ರೂ.ನಂತೆ ನಲ ಬಾಡಿಗೆ ವಿಧಿಸಿ ಗುತ್ತಿಗೆ ನೀಡಬಹುದೆಂದು ದಿನಾಂಕ ೨೧-೭-೧೯೮೭ರಂದು ನಡೆದ ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ ಮತ್ತು ಕಾಮಗಾರಿ ಸ್ಥಾಯಿ ಸಮಿತಿಯ ಜಂಟಿ ಸಭೆಯಲ್ಲಿ ತೀರ್ಮಾನವಾಗಿರುತ್ತದೆ. ಮಳಿಗೆಗಳನ್ನು ನಿರ್ಮಿಸಲು ೧೫-೮-೧೯೮೭ರ ಕಾರ್ಪೊರೇಷನ್ ಅಧಿವೇಶನದಲ್ಲಿ ಒಪ್ಪಿಗೆಯನ್ನು ನಗರ ಪಾಲಿಕೆಯು ನೀಡಿರುತ್ತದೆ.

ಸದರಿ ಸ್ಥಳಗಳಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಎಂದರೆ ಗ್ರಾಹಕರಿಗೆ ತಾವು ಇರುವ ಸ್ಥಳಗಳಲ್ಲೇ ತರಕಾರಿ ಮತ್ತು ಹಣ್ಣಿನ ಸೌಲಭ್ಯ ಒದಗಿಸುವ, ಸಾರ್ವಜನಿಕ ಹಿತದೃಷ್ಟಿಯಿಂದಲೂ ಮತ್ತು ಪ್ರತಿ ಮಳಿಗೆಗೆ ಸರ್ಕಾರದ ನೀತಿಯನ್ನು ಅನುಸರಿಸಿ, ೨೫,೦೦೦ ರೂ.ಗಳನ್ನು ನೀಡಿರುವುದನ್ನು ಗಮನಕ್ಕೆ ತೆಗೆದುಕೊಂಡು ಈ ಒಂದು ಸಾರ್ವಜನಿಕ ಹಿತಾಸಕ್ತಿಯ ಕಾರ್ಯವನ್ನು ಮಾಡಲಾಗಿದೆ. ೫ ವರ್ಷಗಳ ನಂತರ ನಗರ ಪಾಲಿಕೆಯು ಸದರಿ ಕಟ್ಟಡಗಳನ್ನು ಸುಪರ್ದಿಗೆ ತಗೆದುಕೊಳ್ಳುವ ಪರತ್ತಿಗೆ ಒಳಪಡಿಸಿ ಸದರಿ ಮಳಿಗೆಗಳನ್ನು ಕಟ್ಟಲು ಅನುಮತಿ ನೀಡಲಾಗಿದೆ.

೨ ಮಳಿಗೆಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಮೈಸೂರು ನಾಗರೀಕ ವೇದಿಕೆಯು ಒಕ್ಕೂಟ ಮತ್ತು ಮೈಸೂರಿನ ಸಾರ್ವಜನಿಕ ಹಿತಾಶಕ್ತಿ ಸಂಘಗಳು ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು (ಕಟ್ಟಿಗೆಗಳನ್ನು) ಹೂಡಿರುವುದರಿಂದ ಇದರ ಬಗ್ಗೆ ಚರ್ಚೆ ಅಥವಾ ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳುವುದು ಸಬ್‌ಜ್ಯೂಡಿಸ್ ಆಗಬಹುದೆಂದು ವಿಚಾರವನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು.)

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರ ಹೇಳಿಕೆಯನ್ನು ನಾವು ಕೇಳಿದ್ದೇವೆ. ಅವರು ಪ್ರಮುಖವಾದ ವಿಚಾರಕ್ಕೆ ಸರಿಯಾದ ಉತ್ತರವನ್ನು ನೀಡಲಿಲ್ಲ ಎಂದೂ ನಾವು ಹೇಳಬೇಕಾಗುತ್ತದೆ.

ಶ್ರೀ ವೇದಾಂತ ಹೆಬ್ಬಾರ್.- ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪ ಪಿ.ಯು.ಸಿ.ಎಲ್. ನವರು ಹಾಗೂ ಇನ್ನೊಬ್ಬರು ಈ ಮಳಿಗೆಗಳನ್ನು ಕಟ್ಟಿರುವ ಬಗ್ಗೆ ಮೊಕದ್ದಮೆಗಳನ್ನು ಹೂಡಿದ್ದಾರೆ. ಈ ವಿಚಾರ ಈಗಾಗಲೇ ಮೈಸೂರು ನಗರದ ನ್ಯಾಯಾಲಯದಲ್ಲಿ ಇದೆ.....

ಉಪಾಧ್ಯಕ್ಷರು.—ತಾವು ಕ್ರಿಯಾಲೋಪದ ಬಗ್ಗೆ ಹೇಳಿ.

ಶ್ರೀ ವೇದಾಂತ ಹೆಬ್ಬಾರ್.—ನ್ಯಾಯಾಲಯದಲ್ಲಿ ಈ ವಿಷಯ ವಿಚಾರಣೆಗೆ ಇರುವಾಗ ಇದರ ಬಗ್ಗೆ ನಾವು ಈ ಸದನದಲ್ಲಿ ಚರ್ಚೆಮಾಡತಕ್ಕದ್ದು ಸರಿಯಲ್ಲ. ಇಲ್ಲಿ ಚರ್ಚೆ ಮಾಡಿದರೆ ಮುಂದೆ ನ್ಯಾಯಾಲಯದವರು ತೀರ್ಪನ್ನು ಕೊಡುವಾಗ ಅವರಮೇಲೆ ರಿಫ್ಲೆಕ್ಷ್ ಆಗುತ್ತದೆ. ಆದ್ದರಿಂದ ಇದರ ಬಗ್ಗೆ ತಾವು ಚರ್ಚೆಗೆ ಅವಕಾಶ ಕೊಡುವುದು ಸರಿಯಲ್ಲ. ಮಾನ್ಯ ವೊಯ್ಲಿಯವರು ಹಿರಿಯ ನ್ಯಾಯವಾದಿಗಳು. ಅವರೇ ಹೇಳಬೇಕು. ನಾನು ಈ ಕ್ರಿಯಾಲೋಪವನ್ನು ಎತ್ತಿದ್ದೇನೆ. ಇದನ್ನು ತಾವೂ ಕೂಡ ಎತ್ತಿ ಹಿಡಿಯಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ವೊಯಿಲಿ.—ಮಾನ್ಯ ಉಪಾಧ್ಯಕ್ಷರೇ ಮಾನ್ಯ ನಗರಸಭಾ ಸಚಿವರು ಈ ವಿಚಾರವನ್ನು ಗಮನಕ್ಕೆ ತಂದಿರುತ್ತಾರೆ. ಇದೇನು ಹೊಸದಾದ ವಿಚಾರವಲ್ಲ.

ಶ್ರೀ ಎಂ ಚಂದ್ರಶೇಖರ್.—ಮಾನ್ಯ ಉಪಾಧ್ಯಕ್ಷರೇ ಮಾನ್ಯ ಸದಸ್ಯರು ಇದನ್ನು ಕ್ರಮಬದ್ಧವಲ್ಲ ಎನ್ನುವ ಬಗ್ಗೆ ವಿವರವಾಗಿ ಹೇಳಿದ್ದಾರೆ. ನಾವು ಅದನ್ನು ಇಲ್ಲಿ ಚರ್ಚೆ ಮಾಡುವುದು ಸೂಕ್ತವಲ್ಲ ವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು. ಈಗಾಗಲೇ ಇದು ನ್ಯಾಯಾಲಯದಲ್ಲಿರುವುದರಿಂದ ಇದರ ಬಗ್ಗೆ ಚರ್ಚೆಮಾಡಿದರೆ ಕಂಟೆಂಪ್ಟ್ ಆಫ್ ದಿ ಕೋರ್ಟ್ ಆಗುತ್ತದೆ.

ಶ್ರೀ ಎಂ. ವೀರಪ್ಪ ವೊಯಿಲಿ.—ಕ್ರಮಬದ್ಧತೆಯ ವಿಚಾರದಲ್ಲಿ ಈಗ ಪ್ರಶ್ನೆಯಾಗಿದೆ. ಈಗ ನಾನು ಕೇಳುವ ವಿಚಾರ ಇಷ್ಟೇ. ತಾವು ಲಿಲ್ಲಿಗೆ ಉದ್ಘಾಟನೆಗೆ ಹೋಗುವ ಮೊದಲು ನಗರಪಾಲಿಕೆ ಸಚಿವರು ತೋಟಗಾರಿಕೆ ಸಚಿವರು ಹೋಗಿದ್ದರು. ಅವರ ಬಗ್ಗೆ ನಾನು ತಿಳಿದುಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಮಂತ್ರಿಗಳಾಗಿರತಕ್ಕಂಥವರು ಅನ್‌ಆಥರೈಸ್ಡ್ ಫಂಕ್ಷನ್‌ಗೆ ಹೋಗ ಬೇಕೇ ಬೇಡವೇ ಎನ್ನುವ ವಿಚಾರವನ್ನು ತಿಳಿದುಕೊಳ್ಳಬೇಕು.

ಶ್ರೀ ಎಂ. ಚಂದ್ರಶೇಖರ್.—ಅನ್ ಆಥರೈಸ್ಡ್ ಅಲ್ಲವೋ ಹೌದೋ ಎನ್ನುವುದಂ ಅದು ಅಲ್ಲಿ ತೀರ್ಮಾನವಾಗಬೇಕು. ಈಗ ಅದು ನ್ಯಾಯಾಲಯದಲ್ಲಿದೆ. ನಗರಪಾಲಿಕೆ ರೀತಿಯಲ್ಲಿ ಕಾಯಿದೆ ಯನ್ವಯಂ ಅದು ಸರ್ಕಾರದ ಸಮಿತಿಯಾದ್ದರಿಂದ ಪರವಾನಿಗೆಯನ್ನು ಕೊಟ್ಟಿದ್ದೇವೆ. ಅದು ಸರಿ ತಪ್ಪು ಎನ್ನುವುದು ನ್ಯಾಯಾಲಯದಲ್ಲಿ ತೀರ್ಮಾನವಾಗಬೇಕಾಗಿದೆ.

ಶ್ರೀ ಎಂ. ವೀರಪ್ಪ ವೊಯಿಲಿ.—ಕೊಟ್ಟಿದ್ದು, ಕಟ್ಟಿದ್ದು ಅದಂ ನಮಗೆ ಗೊತ್ತಿಲ್ಲ. ನಾನು ಕೇಳುತ್ತಿರುವ ಪ್ರಶ್ನೆ ಇಷ್ಟೇ I am not questioning about the legality of the grant or not. The question is ನೀವು ಉದ್ಘಾಟನೆಗೆ ಹೋದಾಗ ಎಲ್ಲಿ ಸ್ಟಾಲ್ ಇದೆ ಲಿಲ್ಲಿ ಸ್ಟಾಲ್‌ಗಳನ್ನು ಮಾಡುವುದಕ್ಕೆ ಅಧಿಕೃತವಾಗಿ ಇರಬಹುದು ಅಥವಾ ಅನಧಿಕೃತವಾಗಿ ಇರಬಹುದೂ, ಸ್ಟಾಲ್ ಬಗ್ಗೆ ಪ್ಲಾನ್ ಅಪ್ರೂವ್ ಆಗಿತ್ತೇ ? ಲೈಸೆನ್ಸ್ ಕೊಟ್ಟಿತ್ತೆ ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ಲೈಸೆನ್ಸನ್ನು ಕಾರ್ಪೊರೇಷನ್‌ನವರಿಂದ ತೆಗೆದುಕೊಂಡಿದ್ದರೆ ಯಾವ ತಾರೀಖಿನಲ್ಲಿ ತೆಗೆದುಕೊಂಡಿದ್ದರು. ಪ್ಲಾನ್ ಅಪ್ರೂವ್ ಆಗಿದ್ದರೆ ಯಾವ ತಾರೀಖಿನಲ್ಲಿ ಅಪ್ರೂವ್ ಆಗಿತ್ತು. I am not questioning about the grant or the legality or otherwise. ಲೈಸೆನ್ಸ್ ಕೊಟ್ಟಿದ್ದರೆ ಯಾವಾಗ ೧೭ ಷಾಪ್ಸ್‌ಗಳಿಗೆ ಲೈಸೆನ್ಸ್‌ಅನ್ನು ಕೊಟ್ಟಿದ್ದರು ? ಲೈಸೆನ್ಸ್ ನಂಬರ್, ಕೊಟ್ಟಿಂಥ ತಾರೀಖು ಅದನ್ನು ದಯವಿಟ್ಟು ಹೇಳಬೇಕು ? ಎರಡನೆಯದು ತಮಗೆ ಸ್ಟಾಲ್ ಉದ್ಘಾಟನೆಗೆ ಹೋಗುವುದಕ್ಕೆ ಮೊದಲು ಅಲ್ಲಿ ಕಾರ್ಪೊರೇಟರ್ಸ್ ಅಸೋಜಿಷನ್ ಪಾರ್ಟಿಗೆ ಸೇರಿದ್ದವರು, ಮೇಯರ್‌ರವರು ತಮಗೆ ಆಹ್ವಾಪಣೆ ಕೊಟ್ಟಿದ್ದರು ಅದು ಅನಧಿಕೃತವಾಗಿದೆ ಎಂದು. ಆಹ್ವೇಪಣೆ ಕೊಟ್ಟಿದ್ದರೂ ತಾವು ಹೋದಾಗ ಅಸೋಜಿಷನ್ ಕಾರ್ಪೊರೇಟರ್ಸ್ ಬ್ಲಾಕ್ ಫ್ಲಾಗ್ ಡೆಮಾನ್‌ಸ್ಟ್ರೇಷನ್ ಮಾಡಿ ಕೊಂಡು ಒಂದು ಕಡೆ ನಿಂತಿದ್ದರು. ಮತ್ತೊಂದು ಕಡೆ ಜನತಾಪಕ್ಷದ ಕಾರ್ಯಕರ್ತರು ಫ್ಲಾಗ್ ತೆಗೆದು ಕೊಂಡು ಹೋದರು. ತಾವು ಇದ್ದಿರಿ. ಶಮ್ಮ ಪ್ರಾಮಾಣಿಕತೆಯ ಬಗ್ಗೆ ಪ್ರಶ್ನೆಯನ್ನು ಮಾಡುವುದಿಲ್ಲ. ತಾವು ತಪ್ಪು ಹೇಳಬೇಡಿ. ತಾವು ಫಂಕ್ಷನ್‌ಗೆ ಹೋದಾಗ ಜನತಾಪಕ್ಷದ ಕಾರ್ಯಕರ್ತರು ಉತ್ಸಾಹದ ಬರದಲ್ಲಿ ತಮ್ಮನ್ನು ಎತ್ತಿಕೊಂಡು ಫ್ಲಾಟ್ ಫಾರ್ಮಗೆ ತೆಗೆದುಕೊಂಡು ಹೋದರಂ ಎತ್ತಿಕೊಂಡು ಹೋದಾಗ ತಮ್ಮ ಕನ್ನಡಕ ಬಿದ್ದುಹೋಯಿತು ಶರಟು ಹರಿದುಹೋಯಿತೆ ಹೊರತು ಅಪ್ಪೋಜಿಷನ್ ಕಾರ್ಪೊರೇಟರ್ ಏನೊಂದು ತಪ್ಪು ಆಗಲಿಲ್ಲ. ನಿಮ್ಮ ಪಕ್ಷದ ಕಾರ್ಯಕರ್ತರು

ಅಭಿಮಾನದ ಮೇಲೆ ನಿಮ್ಮನ್ನು ಎತ್ತಿಕೊಂಡು ಹೋದಾಗ ಆದಂಥ ಘಟನೆ. ನಾವು ಅದರ ಬಗ್ಗೆ ಆಕ್ಷೇಪಣೆ ಮಾಡಲಿಲ್ಲ.

ಉಪಾಧ್ಯಕ್ಷರು.— ತಾವು ಕ್ಲಾರಿಫಿಕೇಷನ್ ಮಾತ್ರ ಕೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದೆಲ್ಲ ಆಯಿತು, ನೀವು ಸಮಾಧಾನವಾಗಿದ್ದಿರಿ, ಸ್ವತಃ ನಡೆದದ್ದು, ಕಂಡಿದ್ದೀರಿ. ರಾತ್ರಿ ಕಾಂಗ್ರೆಸ್ ಕಾರ್ಯಕರ್ತರನ್ನು, ಆಪೋಜಿಷನ್ ಲೀಡರನ್ನು ಮತ್ತು ಕಾರ್ಪೊರೇಟರ್‌ಗಳನ್ನು ಅರೆಸ್ಟ್ ಮಾಡಿದ್ದು ತಮ್ಮ ಗಮನಕ್ಕೆ ಬಂತೋ ಇಲ್ಲವೋ ? ಮಂತ್ರಿಗಳಾಗಿ ಸ್ವತಃ ಕಣ್ಣಾರೆ ಕಂಡದ್ದೂ ತಮ್ಮ ಗಮನಕ್ಕೆ ಬಂದದ್ದು ಉಂಟು. ಹೀಗೆ ನಿಮ್ಮ ಗಮನಕ್ಕೆ ಬಂದಮೇಲೆ ಡಿ–ಸಿ ದಿವಸ ಅವರು ಪೋಲೀಸ್ ಕಸ್ಟಡಿಯಲ್ಲಿ ಇದ್ದರು. ಆದರೆ ನೀವು ಸರಿಯಾದ ಮಾಹಿತಿಯನ್ನು ಗೃಹ ಇಲಾಖೆಗೆ ತಿಳಿಸುವುದಕ್ಕೆ ಏಕೆ ತಪ್ಪಿದಿರಿ ?

ಶ್ರೀ ಎಂ. ಚಂದ್ರಶೇಖರ್.—ತೋಟ ಬೆಳೆಗಾರರ ಮಾರಾಟ ಸಹಕಾರ ಸಂಘ ಸರ್ಕಾರದ ಸ್ವಾಯತ್ತತೆ ಮೇಲೆ ಇರತಕ್ಕ ಸಂಘ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದರ ಬಗ್ಗೆ ನಾನಂ ಪ್ರಶ್ನೆ ಹಾಕಲಿಲ್ಲ.

ಶ್ರೀ ಎಂ. ಚಂದ್ರಶೇಖರ್.—ನೀವು ಹೇಳುತ್ತೀರಲ್ಲ ಅದಕ್ಕೆ ಹೇಳಿದೆ. ಅದಕ್ಕೆ ನಮ್ಮ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯಿದೆಯ ಸೆಕ್ಷನ್ ಪ್ರಕಾರ ಯಾವುದೇ ಅನುಮತಿಯನ್ನು ಕೊಡಬೇಕಾದ ಅಗತ್ಯವಿಲ್ಲ, ಸರ್ಕಾರಿ ಕಟ್ಟಡಗಳಿಗೆ ಅರೆ ಸರ್ಕಾರಿ ಕಟ್ಟಡಗಳಿಗೆ ಲೈಸೆನ್ಸ್ ಕೊಡಬೇಕಾದ ಅಗತ್ಯವಿಲ್ಲ. ಆದರೂ ಪ್ರಕರಣ ಯಾವಾಗ ಹೆಚ್ಚಾಯಿತೋ ಅದನ್ನು ನೋಡಿಕೊಂಡು ನಗರ ಪಾಲಿಕೆಯವರು ಡಿ–ಸಿ–ಗೆ ರಿಂದು ನಾಮಿನಲ್ ಲೈಸೆನ್ಸ್ ಕೊಟ್ಟಿದ್ದಾರೆ, ಅಂದರೆ ಫಂಕ್ಷನ್‌ನ ಹಿಂದಿನ ದಿವಸ ಕೊಟ್ಟಿದ್ದಾರೆ. ಅಲ್ಲಿ ನಾನು ಹೋದಾಗ ನಡೆದಂತಹ ವಿಚಾರ ಇಷ್ಟೆ. ನಾನು ಪ್ರವಾಸಿ ಮಂದಿರಕ್ಕೆ ಹೋದಾಗ ನಗರಪಾಲಿಕೆಯವರಾಗಲಿ ಅಥವಾ ಆ ಪಕ್ಷದವರಾಗಲಿ ಈ ಪಕ್ಷದವರಾಗಲಿ ಈ ರೀತಿ ಆಗಿದೆ ಎಂದು ಯಾರೂ ತಿಳಿಸಲಿಲ್ಲ. ಕಪ್ಪು ಬಾವುಟವನ್ನು ಪ್ರದರ್ಶನ ಮಾಡುತ್ತಾರೆಂದು ಹೇಳಿದರು ಅದೇನು ತಪ್ಪಲ್ಲ, ಕಾರ್ಯಕರ್ತರೋ ಏನೋ ಅಭಿಪ್ರಾಯ ಇಟ್ಟುಕೊಂಡಿದ್ದಾರೆ ಮಾಡಲಿ ಎಂದೆ. ನನ್ನನ್ನು ಭೇಟಿ ಮಾಡಿದವರು ಯಾರೂ ಕೂಡ ಇದು ಕಾನೂನಿಗೆ ವಿರೋಧವಾಗಿದೆ ಎಂದು ಹೇಳಲಿಲ್ಲ. ನಾನು ಮತ್ತು ನಗರಪಾಲಿಕೆಯ ಮೇಯರ್ ಹಾಗೂ ಮಾನ್ಯ ಸದಸ್ಯರಾದ ವೇದಾಂತ ಹೆಮ್ಮಿಗೆಯವರು ಹೋದೆವು. ಹಿಂದೆ ನಾವೂ ಕೂಡ ಕಪ್ಪು ಬಾವುಟ ಪ್ರದರ್ಶನ ಮಾಡುವಂಥ ಕಾರ್ಯಕ್ರಮವನ್ನು ಮಾಡಿದ್ದೇವೆ, ತಮಗೆ ಗೊತ್ತಿರುವ ಹಾಗೆ ೧೯೭೪ ರಿಂದ ಸುಮಾರು ವರ್ಷಗಳ ಕಾಲ ನಾವು ವಿರೋಧ ಪಕ್ಷದಲ್ಲಿದ್ದಾಗ ಚಳುವಳಿಗಳನ್ನು ಮಾಡಿದ್ದೇವೆ, ಕಪ್ಪು ಬಾವುಟ ಪ್ರದರ್ಶನ ಮಾಡಿದ್ದೇವೆ. ಒಂದು ವಿಚಾರವನ್ನು ಇದಕ್ಕೆ ಸಂಬಂಧಪಟ್ಟ ಹಾಗೆ ಹೇಳಿದರೆ ಯಾರೂ ತಪ್ಪು ತಿಳಿದುಕೊಳ್ಳಬಾರದು. ರಾಜಕೀಯ ಪಕ್ಷಗಳು ಯಾವರೀತಿ ತಮ್ಮ ಕಾರ್ಯಕರ್ತರನ್ನು ಶಿಸ್ತಿನಲ್ಲಿ ಇಟ್ಟುಕೊಳ್ಳಬೇಕೆಂಬುದಕ್ಕೆ ನಮ್ಮ ಪಕ್ಷವನ್ನು ಸೇರಿಸಿ ಹೇಳುತ್ತೇನೆ. ೧೯೭೮ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಅರೆಸ್ಟ್ ಮಾಡಿದಾಗ ದೇಶಾದ್ಯಂತ ಪ್ರತಿಭಟನೆ ನಡೆಯಿತು ಆ ಸಮಯದಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ನಮ್ಮ ರಾಜ್ಯಕ್ಕೆ ಬಂದಾಗ ನಮ್ಮ ಪಕ್ಷದ ಪರವಿಯಿಂದ ಪ್ರತಿಭಟನೆ ಸೂಚಿಸಬೇಕೆಂದು ಕಪ್ಪು ಬಾವುಟ ಪ್ರದರ್ಶಿಸಲು ವಿಚಾರ ಮಾಡಿದೆವು. ಅದಕ್ಕೆ ಪೋಲೀಸ್ ಇಲಾಖೆಯನ್ನು ಕೇಳಲಾಗಿ, ಎಲ್ಲಾ ಕಡೆ ಕಟಕಟೆ ಹಾಕಿದ್ದೇವೆ. ನೀವು ಕಟಕಟೆಯ ಒಳಗೆ ಇಂಥ ಸ್ಥಳದಲ್ಲಿ ನಿಂತು ಕಪ್ಪು ಬಾವುಟ ಪ್ರದರ್ಶನ ಮಾಡಬಹುದೆಂದು ಹೇಳಿದರು. ಆದೇ ಪ್ರಕಾರ ನಾವು ಮಹಾತ್ಮಗಾಂಧಿ ಪ್ರತಿಮೆಯ ಮೂಲೆಯಲ್ಲಿ ನಿಂತು ಕಪ್ಪು ಬಾವುಟವನ್ನು ಪ್ರದರ್ಶನ ಮಾಡಿದೆವು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ದಾವಣಗೆರೆ, ಶಿವಮೊಗ್ಗ, ಗುಲ್ಬರ್ಗದಲ್ಲೆಲ್ಲ ಕಲ್ಲು ತೂರಾಟ ಮಾಡಿದಿರಲ್ಲ ಅದಕ್ಕೆ ಏನು ಹೇಳುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಆ ಸಮಯದಲ್ಲಿ ಕೇಂದ್ರದಲ್ಲಿ ಜನತಾ ಸರ್ಕಾರ ಇದ್ದು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದ ಕಾರಣ ಲಾರಿಗಳಲ್ಲಿ ಗೂಂಡಾಗಳು ಬಂದು ಕೋಲಿನ ತುದಿಗೆ ಚೂಪಾದ ಮಾನೆಗಳನ್ನು ಹಾಕಿಕೊಂಡು ಪೋಲೀಸರು ಇದ್ದರೂ ಕೂಡ ಕಪ್ಪು ಬಾವುಟ ಹಿಡಿದಿದ್ದವರನ್ನು ತಿವಿದರು. ಅದನ್ನು ಪೋಲೀಸರು ನೋಡಿಕೊಂಡೇ ನಿಂತಿದ್ದರು. ತತ್ಪರಿಣಾಮವಾಗಿ ಅನೇಕರು ಆಸ್ಪತ್ರೆಯನ್ನು ಸೇರಿದರು. ಆಗ ನಾವು ವಿರೋಧ ಪಕ್ಷದಲ್ಲಿದ್ದೆವು, ನೀವು ಆಡಳಿತ ಪಕ್ಷದಲ್ಲಿದ್ದು ಸರ್ಕಾರವನ್ನು

ನಡೆಸುತ್ತಿದ್ದಾರಿ. ಆ ಸಂದರ್ಭದಲ್ಲಿ ಯಾವರೀತಿ ಕಾರ್ಯಕರ್ತರು ನಡೆದುಕೊಂಡರು ಎಂಬುದನ್ನು ಜ್ಞಾಪಕ ಮಾಡುತ್ತಾ,.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಶಿವಮೊಗ್ಗ ಮತ್ತು ದಾವಣಗೆರೆಯಲ್ಲಿ ನಡೆದದ್ದರ ಬಗ್ಗೆ ಹೇಳಲಿಲ್ಲವಲ್ಲ!

ಶ್ರೀ ಎಂ. ಚಂದ್ರಶೇಖರ್.—ನಾನು ಬೆಂಗಳೂರಿನವನಾದ್ದರಿಂದ ನನ್ನ ಗಮನಕ್ಕೆ ಬಂದದ್ದನ್ನು ಹೇಳುತ್ತೇನೆ.

೧೧–೩೦ ಪಿ.ಎಂ.

ನನ್ನ ಗಮನಕ್ಕೆ ಬಂದಿರುವುದನ್ನು ಹೇಳುತ್ತಿದ್ದೇನೆ. ಈ ರೀತಿ ಲಾರಿಗಳಲ್ಲಿ ಕೋಲಿನ ತುದಿಯಲ್ಲಿ ಮೊನಚಾದ ಆಯುಧ ಹಾಕಿ ಹೊಡೆದಂಥವರನ್ನು ಕಾರ್ಯಕರ್ತರು ಎಂದು ಹೇಳುವುದಕ್ಕಾಗುತ್ತದೆಯೆ? ಅವರು ಕಾಂಗ್ರೆಸ್ಸಿನವರಾಗಲೀ, ಜನತಾ ಪಕ್ಷದವರಾಗಲೀ ಅವರನ್ನು ಕಾರ್ಯಕರ್ತರು ಎಂದು ಹೇಳುವುದಕ್ಕಾಗುವುದಿಲ್ಲ. ಶಿಸ್ತಿನಿಂದ ಇದ್ದಂಥ ಚಳುವಳಿಯನ್ನು ದಮನ ಮಾಡುವ ಪ್ರಯತ್ನ ಮಾಡಿದರಂ. ಕಪ್ಪು ಭಾವುಟ ಪ್ರದರ್ಶನ ಎಂದು ಹೇಳಿದಾಗ ಪೋಲೀಸ್ ಇಲಾಖೆಯವರು ಎಲ್ಲೋ ಒಂದು ಸ್ಥಳ ತೋರಿಸಿರುತ್ತಾರೆ, ಅಲ್ಲಿ ಅವರು ಪ್ರದರ್ಶನ ಮಾಡುತ್ತಾರೆ ಎಂದು ಅಂದುಕೊಂಡಿದ್ದೆ. ನಗರಪಾಲಿಕೆ ಸದಸ್ಯರು ಈ ರೀತಿ ಮಾಡುವುದಕ್ಕಾಗುವುದಿಲ್ಲ, ತಪ್ಪಾಗಿದೆ, ಹಾಗಾಗಿದೆ, ಹೀಗಾಗಿದೆ ಎಂದು ಹೇಳಿದರು, ಮೇಯರ್ ಅವರು ಹೇಳಿದರು ಇದು ಕಾನೂನುಬಿದ್ದಾಗಿ ಆಗಿದೆ, ನಗರಪಾಲಿಕೆ ಒಪ್ಪಿಗೆ ತೆಗೆದುಕೊಂಡು ಮಾಡಿದ್ದಾರೆ, ಅವರೂ ಅನಕ್ಕೆ ಪಾರ್ಟಿಗಳು, ಸ್ಥಾಯಿ ಸಮಿತಿಯಲ್ಲಿ ಅವರೂ ಇದ್ದರು. ಈಗ ರಾಜಕೀಯವಾಗಿ ನಿನ್ನೆ ಮೊನ್ನೆಯಿಂದ ಗಲಾಟೆ ಮಾಡುತ್ತಿದ್ದಾರೆ ಎಂದು ಹೇಳಿದಾಗ ನಾನೂ ಹೇಳಿನೆ, ಕಾನೂನುಬದ್ದವೋ ಅಲ್ಲವೋ ಆಮೇಲೆ ಪರಿಶೀಲನೆ ಮಾಡೋಣ. ನಾನು ಸರ್ಕಾರದ ಪ್ರತಿನಿಧಿಯಾಗಿ ಬಂದಿದ್ದೇನೆ, ಹಿಂದಕ್ಕೆ ಹೋಗುವುದಿಲ್ಲ, ಉದ್ಘಾಟನೆ ಆಗಲೇಬೇಕು ಎಂದು ಹೇಳಿದೆ. ಸಾರ್ವಜನಿಕ ಉದ್ದೇಶಕ್ಕೋಸ್ಕರ ಇದನ್ನು ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದೆಲ್ಲಾ ಬೇಡ. ನೀವು ಅದರ ಮೆರಿಟ್‌ಗೆ ಹೋಗುತ್ತಿದ್ದೀರಿ. ಇದೆಲ್ಲಾ ಇರ್ರೆಲೆವೆಂಟ್. ಹಾಗಾದರೆ ನಾನೂ ಎಲ್ಲಾ ಹೇಳುತ್ತೇನೆ. ಅದು ಪೂರ್ತಿ ಅನ್ ಆಥರೈಸ್ಡ್ ಎಂದು ಹೇಳುವುದಕ್ಕೆ ದಾಖಲೆ ಇದೆ. ನಾನು ಅದನ್ನು ಸಾಬೀತುಪಡಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಈ ವಿಚಾರ ನ್ಯಾಯಾಲಯದಲ್ಲಿದೆ. ನಮ್ಮ ನಿಮ್ಮ ಮಧ್ಯದಲ್ಲಿಲ್ಲ. ನನ್ನ ಭಾವನೆಯನ್ನು ನಾನು ಹೇಳಿದೆ. ನ್ಯಾಯಾಲಯದವರು ಏನು ಎಂಬುದನ್ನು ಹೇಳಲಿ. ನನ್ನ ಭಾವನೆಯನ್ನು ಹೇಳಿ ಉದ್ಘಾಟಣೆ ಮಾಡುವುದಕ್ಕೆ ಬಂದಿದ್ದೇನೆ ಎಂದು ಹುಡುಗರಿಗೆ ಹೇಳಿದೆ. ಅವರು ಆಗುವುದಿಲ್ಲ ಎಂದು ಹೇಳಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ ಎಂದು ನನಗನ್ನಿಸಿತು. ಕಾರ್ಡನ್ ಮಾಡಿ ನಾವು ಉದ್ಘಾಟನೆ ಮಾಡುವಹಾಗೆ ವ್ಯವಸ್ಥೆ ಮಾಡಿ ಎಂದು ಪೋಲೀಸರಿಗೆ ಹೇಳಿದೆವು. ಕಾರಣಾಂತರದಿಂದ ಅದು ಆಗಲಿಲ್ಲ. ನಮ್ಮ ಪಕ್ಷದ ಕಾರ್ಯಕರ್ತರು ಉದ್ಘಾಟಣೆ ಮಾಡಬೇಕು ಎಂದು ಹೇಳಿದರು. ನಾನು ಒಬ್ಬ ಕಾರ್ಯಕರ್ತನಾಗಿ ಮಂತ್ರಿಯಾಗಿದ್ದೇನೆಯೇ ಹೊರತು ಅದನ್ನು ಬಿಟ್ಟು ಮಂತ್ರಿಸಾಗಿಲ್ಲ ಎಂದು ಹೇಳಿ ನಮ್ಮ ಪಕ್ಷದ ಕಾರ್ಯಕರ್ತರು ಸೂಚಿಸಿದ ಪ್ರಕಾರ ಉದ್ಘಾಟಣೆ ಮಾಡಿದೆ. ನಾನು ಮುಂದಿನ ಸಭೆಯಲ್ಲಿ ಹೋದಾಗ ಇದು ಸಾಮಾನ್ಯವಾಗಿ ಆಗುವಂಥದ್ದು, ಅವರು ಉತ್ಸಾಹದಲ್ಲಿ ಈ ರೀತಿ ಮಾಡಿರಬಹುದು, ಅದಕ್ಕಾಗಿ ನಮ್ಮ ಪಕ್ಷದ ಕಾರ್ಯಕರ್ತರು ಅವರ ಮೇಲೆ ಪ್ರತೀಕಾರ ಕ್ರಮ ತೆಗೆದುಕೊಳ್ಳಬಾರದು ಎಂದು ಹೇಳಿದೆ. ಪೋಲೀಸರಂ ಬಂದೋಬಸ್ತ್ ಮಾಡಬಹುದಾಗಿತ್ತು, ಆದರೆ ನಿತಕ್ಕೆ ಮಾಡಲಿಲ್ಲವೋ ಗೊತ್ತಿಲ್ಲ ಎಂದು ಹೇಳಿದೆ. ಪೋಲೀಸ್ ಇಲಾಖೆ ವಿಚಾರದಲ್ಲಿ ಒಂದು ಮಾತು ಹೇಳುವುದಾದರೆ ಕೇವಲ ನಮ್ಮ ಸರ್ಕಾರದ ಬಗ್ಗೆ ಮಾತ್ರ ಅಲ್ಲ, ನಮ್ಮ ದೇಶದಲ್ಲಿ ಇಂಥ ಪರಿಸ್ಥಿತಿ ಬಂದಾಗ ತಹಬಂದಿಗೆ ತರುವುದಕ್ಕೆ ನಾನಾ ರೀತಿಗಳಿರುತ್ತವೆ. ಅಧಿಕಾರಿಗಳು ಮನಸ್ಸು ಮಾಡಿದರೆ ಕಾರ್ಡನ್ ಮಾಡಬಹುದಾಗಿತ್ತು. ಆ ರೀತಿ ಮಾಡಿದ್ದರೆ ಅದನ್ನು ನುಗ್ಗಿ ಒಳಕ್ಕೆ ಬರುವುದಕ್ಕೆ ಆಗುತ್ತಿರಲಿಲ್ಲ. ಲಾಠಿ ಚಾರ್ಜ್, ಟಿಯರ್ ಗ್ಯಾಸ್ ಮತ್ತು ಗುಂಡು ಹೊಡೆಯುವುದರಲ್ಲಿ ಸರ್ವಾಂಗೆ ವಿಶ್ವಾಸ ಇಲ್ಲ ಕಾರ್ಡನ್ ಮಾಡಿ ಕಂಟ್ರೋಲ್ ಮಾಡಬಹುದಾಗಿತ್ತೇನೋ ಅನ್ನಿಸಿತು. ಅವರೂ ಕೂಡ ಈ ತರಹ ಆಗುತ್ತದೆ ಎಂದು ನೆನೆಸಿರಲಿಲ್ಲ ಎಂದು ಕಾಣಿಸುತ್ತದೆ. ಶಾಸಕರಾದ ಚಿಕ್ಕಬೋರಯ್ಯ ನವರೂ ಸಮಾಧಾನ ಮಾಡುತ್ತಿದ್ದರು. ಸರಿಹೋಗಬಹುದು ಎಂದು ಪೋಲೀಸರೂ ತಿಳಿದುಕೊಂಡಿದ್ದರು.

ಆದರೂ ಆಯಿತು. ನಾನೇನೂ ಅದನ್ನು ಮನಸ್ಸಿಗೆ ತೆಗೆದುಕೊಂಡಿಲ್ಲ. ರಾಜಕೀಯ ಕ್ಷೇತ್ರದಲ್ಲಿ ಇದಲ್ಲಾ ಆಗುತ್ತದೆ. ಇಷ್ಟು ಮಾತ್ರ ಹೇಳಬಹುದು. ನಾವು ಶಿಸ್ತಿನಿಂದ ನಡೆದುಕೊಂಡಿದ್ದೇವೆ. ನಗರ ಪಾಲಿಕೆಯ ಸದಸ್ಯರೂ ಭಾಗಿಗಳಾಗಿದ್ದುಕೊಂಡು ಕೊನೆಯ ದಿವಸ ಈ ರೀತಿ ಮಾಡಿದ್ದು ಯೋಗ್ಯವಲ್ಲ. ಯಾವುದೇ ರಾಜಕೀಯ ಪಕ್ಷದ ಕಾರ್ಯಕರ್ತರೂ ಈ ರೀತಿ ಮಾಡಬಾರದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸಂತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಸಚಿವರು ಪ್ರಾಮಾಣಿಕವಾಗಿ ಹೇಳಿದ್ದಾರೆ ಎಂಬುದಾಗಿ ನಾನು ಭಾವನೆ ವ್ಯಾಪಂತ್ತೇನೆ. ಏಕೆಂದರೆ ಪೋಲೀಸ್‌ನವರು ಅವರನ್ನು ಒಳಗಡೆ ಬರುವುದಕ್ಕೆ ಬಿಡಬಾರದಾಗಿತ್ತು ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಹಾಗೆಂದ ಮಾತ್ರಕ್ಕೆ ತಾವು ಒತ್ತಡ ತಂದಿರೋ ಅಥವಾ ಪೋಲೀಸ್‌ನ ಮೇಲಾಧಿಕಾರಿಗಳು ಒತ್ತಡ ತಂದರೋ ಗೊತ್ತಿಲ್ಲ. ಆಗ ಅಂದರೆ ಒಂದು ಘಟನೆಯಲ್ಲಿ ಗೊಂದಲವಾಗಿರಬಹುದು. ಆದರೆ ಅಂದು ರಾತ್ರಿ ನೂರಾರು ಜನರನ್ನು ಪೋಲೀಸ್ ನವರು ಅರೆಸ್ಟ್ ಮಾಡಿ, ೩ ದಿವಸಗಳವರೆಗೆ ಜ್ಯುಡಿಷಿಯಲ್ ಕಸ್ಟಡಿಯಲ್ಲಿಟ್ಟರತಕ್ಕಂತಹ ಪ್ರಸಂಗ ತಮ್ಮ ಗಮನಕ್ಕೆ ಬಂದ ಮೇಲೆ ಈ ವಿಚಾರವನ್ನು ಗೃಹ ಮಂತ್ರಿಗಳ ಗಮನಕ್ಕೆ ಏಕೆ ತರಲಿಲ್ಲ ? ಪೋಲೀಸ್‌ನವರು ಆ ರೀತಿ ಅಜಾಗರೂಕತೆಯಿಂದ ವರ್ತನೆ ಮಾಡಬೇಕಾದ ಪ್ರಸಂಗ ಇರಲಿಲ್ಲ. ತಮ್ಮ ಜನತಾ ಪಕ್ಷದ ಕಾರ್ಯಕರ್ತರು ತಮ್ಮನ್ನು ಸುತ್ತುವರಿದು, ಅಲ್ಲಿಂದ ಸೇಫ್ ಆಗಿ ಕರೆದುಕೊಂಡು ಬಂದಿರತಕ್ಕಂತಹದ್ದು ಇದೆ. ಈ ವಿಚಾರ ತಮ್ಮ ಗಮನಕ್ಕೆ ಬಂದ ಮೇಲೂ, ಅವರ ಮೇಲೆ ಕೇಸ್ ಹಾಕಿದ್ದಾರೆ. ಅವರನ್ನೂ ೩ ದಿವಸಗಳ ಕಾಲ ಜ್ಯುಡಿಷಿಯಲ್ ಕಸ್ಟಡಿಯಲ್ಲಿ ಇಟ್ಟುಕೊಂಡಿದ್ದಾರೆ. ಅವರ ಮೇಲೆ ಏನಂ ಕೇಸು ಹಾಕಿದ್ದಾರೆ, ಅದನ್ನು ವಿತ್‌ಡ್ರಾ ಮಾಡಿ, ಏನೋ ಅಪ್ಪಿ ತಪ್ಪಿ ಘಟನೆ ನಡೆದಿದೆ, ಅದನ್ನು ತಿಳಿಗೊಳಿಸತಕ್ಕ ಪ್ರಯತ್ನವನ್ನು ತಾವು ಏಕೆ ಮಾಡಲಿಲ್ಲ ಎನ್ನುವುದೇ ನನ್ನ ಪ್ರಶ್ನೆ.

ಶ್ರೀ ಎಂ. ಚಂದ್ರಶೇಖರ್.—ನಮ್ಮ ಪಕ್ಷದ ಕಾರ್ಯಕರ್ತರಂ ಹಾಗೂ ನಾನು ಅಲ್ಲಿಗೆ ಹೋದಾಗ ನನ್ನನ್ನು ಅಲ್ಲಿದ್ದಂತಹ ಕಾಂಗ್ರೆಸ್ ಕಾರ್ಯಕರ್ತರಂ ಎಳೆದಾಡಿದ್ದುಂಟು. ಆ ಸಮಯದಲ್ಲಿ ನನ್ನ ಜೇಬು ಕೂಡ ಕತ್ತೊಯಿತು ಆ ಸಮಯದಲ್ಲಿ ಇದರ ಲಾಭ ತೆಗೆದುಕೊಂಡಿರತಕ್ಕಂತಹವರು ನಮ್ಮ ಪಕ್ಷದ ಕಾರ್ಯಕರ್ತರು ಎಂದು ಹೇಳುವುದಿಲ್ಲ. ಅಲ್ಲಿ ಬೇರೆಯವರೂ ಕೂಡ ಇದ್ದರು. ನನ್ನ ಪರ್ಸ್ ಕೂಡ ಹೋಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದರಲ್ಲಿ ಎಷ್ಟು ಹಣ ಇತ್ತು ?

ಶ್ರೀ ಎಂ. ಚಂದ್ರಶೇಖರ್.—ಹೋಗಿಬರಬೇಕಾಗುವಷ್ಟು ಖರ್ಚಿನ ಹಣ ಇತ್ತು. ನಾವೆಲ್ಲ ಹೆಚ್ಚು ಹಣವನ್ನು ತೆಗೆದುಕೊಂಡು ಹೋಗುವವರಲ್ಲ. ಇತರೆ ಖರ್ಚು ಯಾವುದೂ ಇಲ್ಲ. ನಗರ ಪಾಲಿಕೆಯ ಸದಸ್ಯರು ಗಲಾಟೆ ಮಾಡಿ ನನ್ನನ್ನು ಎಳೆದಾಡಿದಾಗ, ನಮ್ಮ ಪಕ್ಷದ ಕಾರ್ಯಕರ್ತರು ರಕ್ಷಣೆ ಮಾಡಿಕೊಂಡು ನನ್ನನ್ನು ಕರೆದುಕೊಂಡು ಬಂದರು. ಪೋಲೀಸ್‌ನವರು ಮುಂದಿನ ಕ್ರಮ ತೆಗೆದುಕೊಂಡಿರುವುದಕ್ಕೂ ನನಗೂ ಯಾವುದೇ ಸಂಬಂಧ ಇಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಸನ್ಮಾನ್ಯ ಉಪಾಧ್ಯಕ್ಷರೇ...

ಶ್ರೀ ಎಂ. ವೀರಪ್ಪ ಮೊಯಿಲಿ — ಅವರು ಹೇಗೆ ಮಾತನಾಡುವುದಕ್ಕೆ ಬರುತ್ತದೆ ? ಅವರು ಇದರಲ್ಲಿ ಸಹಿ ಮಾಡಿಲ್ಲ.

ಉಪಾಧ್ಯಕ್ಷರು.—ಆ ಕ್ಷೇತ್ರದವರು ಎಂಬ ಕಾರಣದಿಂದ ನಾನು ಅವರಿಗೆ ಪರ್ಮಿಟ್ ಮಾಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಗಮನ ಸೆಳೆಯುವ ಸೂಚನೆಯಲ್ಲಿ ಅವರ ಹೆಸರು ಇಲ್ಲ. ಅವರು ಹೇಗೆ ಮಾತನಾಡುತ್ತಾರೆ ? ಇವತ್ತು ತಾವು ಹಾಕಿರತಕ್ಕ ಸಂಪ್ರದಾಯ ಕೆಟ್ಟ ಸಂಪ್ರದಾಯ ವಾಗುತ್ತದೆ.

ಶ್ರೀ ಜಿ. ಎಂ. ಚಿಕ್ಕಬೋರಯ್ಯ.—ನಿನ್ನೆ ಗಮನ ಸೆಳೆಯುವ ಸೂಚನೆಯನ್ನು ನಾನೂ ಕೂಡ ಕೊಟ್ಟಿದ್ದೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಚಾಮರಾಜಾದಲ್ಲಿ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹಾಗಾದರೆ ನಾವು ಅಷ್ಟೂ ಜನವೂ ಎದ್ದು ಕೇಳುತ್ತೇವೆ. ನಿನ್ನೆ ಅವರು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದರೆ, ಅದು ಬಂದಾಗ ಬೇಕಾದರೆ ಕೇಳಲಿ.

ಉಪಾಧ್ಯಕ್ಷರು.—ಅವರ ಕ್ಷೇತ್ರವಾಗಿರುವುದರಿಂದ ಕೇಳಿ ಎಂದು ಹೇಳಿದೆ ಅಷ್ಟೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಕೇಳುವುದು ಸರಿಯಾದುದಲ್ಲ. ಅವರ ಸೂಚನೆ ಬಂದ ಮೇಲೆ ಬೇಕಾದರೆ ಕೇಳಲಿ. ಇದು ಕೆಟ್ಟ ಸಂಪ್ರದಾಯವಾಗುತ್ತದೆ. ಇವತ್ತು ಅವರು ಕೇಳುವುದಕ್ಕೆ ಅವಕಾಶ ಇಲ್ಲ.

ಉಪಾಧ್ಯಕ್ಷರು.—ಮಾನ್ಯ ವೇದಾಂತ ಹೆಮ್ಮಿಗೆಯವರೇ ತಾವು ಪ್ರತ್ಯೇಕವಾದ ನೋಟೀಸ್ ಕೊಡಿ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ವೇದಾಂತ ಹೆಮ್ಮಿಗೆ.—ಚಾಪಮರಾಜದಲ್ಲಿ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಹೇಳುವಂಥದ್ದು ರೆಕಾರ್ಡಿಗೆ ಹೋಗಬಾರದು.

(ಗೊಂದಲ)

ಉಪಾಧ್ಯಕ್ಷರು.—ಶ್ರೀಮಾನ್ ವೇದಾಂತ ಹೆಮ್ಮಿಗೆಯವರೇ ತಾವು ದಯಮಾಡಿ ಕುಳಿತುಕೊಳ್ಳಿ. ಅವರು ಹೇಳಿದ್ದನ್ನು ರೆಕಾರ್ಡ್ ಮಾಡಬೇಡಿ. ಮುಂದಿನ ಪ್ರಶ್ನೆ ಶ್ರೀ ಶಿವಾನಂದ ಕೌಜಲಗಿಯವರೆ ತಾವು ಪ್ರಶ್ನೆಯನ್ನು ಕೇಳಿ.

(ಉಪಾಧ್ಯಕ್ಷರ ಆದೇಶದಂತೆ ಶ್ರೀಮಾನ್ ವೇದಾಂತ ಹೆಮ್ಮಿಗೆಯವರು ಮಾತನಾಡಿದ್ದನ್ನು ರೆಕಾರ್ಡ್ ಮಾಡಿಕೊಳ್ಳಲಿಲ್ಲ)

(ಶ್ರೀ ಶಿವಾನಂದ ಸಿವಚ್. ಕೌಜಲಗಿಯವರ ಗೈರು ಹಾಜರಿ)

೨) ಶ್ರೀ ಸಿದ್ಧಗಂಗಾ ಮಠದಲ್ಲಿ ಸ್ವಾಮಿಗಳೀರ್ವರ ಭಿನ್ನಾಭಿಪ್ರಾಯದಿಂದ ಶಾಂತಿ ಭಂಗವಾಗಿರುವುದು.

ಶ್ರೀ ಆರ್. ವೆಂಕಟರಾಮಯ್ಯ.—ಶ್ರೀ ಸಿದ್ಧಗಂಗಾ ಮಠದಲ್ಲಿ ಹಿರಿಯ ಮತ್ತು ಕಿರಿಯ ಸ್ವಾಮಿಗಳ ಮಧ್ಯೆ ಆಡಳಿತದಲ್ಲಿನ ಭಿನ್ನಾಭಿಪ್ರಾಯಗಳಿಂದ ಮಠದಲ್ಲಿ ಶಾಂತಿಭಂಗವಾಗಿರುವ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಗೃಹಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ನಾನು ಈ ಕೆಳಕಂಡ ಹೇಳಿಕೆಯನ್ನು ಓದುತ್ತೇನೆ.

೧೯೮೫ನೇ ಇಸವಿಯಿಂದ ತುಮಕೂರಿನಲ್ಲಿರುವ ಶ್ರೀ ಸಿದ್ಧಗಂಗಾ ಮಠದ ಹಿರಿಯ ಮತ್ತು ಕಿರಿಯ ಸ್ವಾಮೀಗಳಲ್ಲಿ ಮಠದ ಅಧಿಕಾರದ ವಿಚಾರದಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳು ತಲೆದೋರಿದ್ದು ವೈಮನಸ್ಸು ಉಂಟಾಯಿತು. ಸದರಿ ಮಠದ ಭಕ್ತಾದಿಗಳಲ್ಲಿ ಕೆಲವರು ಹಿರಿಯ ಸ್ವಾಮಿಗಳವರಿಗೂ ಮತ್ತು ಕೆಲವರು ಕಿರಿಯ ಸ್ವಾಮಿಗಳವರಿಗೂ ತಮ್ಮ ಬೆಂಬಲ ವ್ಯಕ್ತಪಡಿಸುತ್ತಾ ಬಂದಿದ್ದು ಎರಡು ಗುಂಪಾಗಿ, ತಮ್ಮ ತಮ್ಮ ಸ್ವಾಮಿಗಳ ಸ್ಥಾನ ಭದ್ರತೆಗಾಗಿ ಸೆಣಸಾಟ ನಡೆಸುತ್ತಿದ್ದು, ನವೆಂಬರ್ ೧೯೮೫ ರಿಂದ ಇಂದಿನವರೆಗೂ ಪದೇ ಪದೇ ದೊಂಬಿ ಗಲಾಟೆ ಮಾಡುವ ಮೂಲಕ ಸಾರ್ವಜನಿಕ ಶಾಂತಿಗೆ ಭಂಗ ಉಂಟು ಮಾಡುತ್ತಾ ಬಂದಿರುತ್ತಾರೆ.

೧೯೮೫ನೇ ನವೆಂಬರ್ ತಿಂಗಳಿನಿಂದ ಉಭಯ ಸ್ವಾಮಿಗಳವರ ಬೆಂಬಲಿಗರು ನೀಡಿದ ದೂರುಗಳ ಅನ್ವಯ ಕ್ಯಾತಸಂದ್ರ ಪೋಲೀಸ್ ಠಾಣೆಯಲ್ಲಿ ಒಟ್ಟು ೩೭ ಮೊಕದ್ದಮೆಗಳನ್ನು ಇಂದಿನವರೆಗೂ ಉಭಯ ಸ್ವಾಮಿಗಳ ಬೆಂಬಲಿಗರ ಮೇಲೆ ನೋಂದಾಯಿಸಿಕೊಂಡಿರುತ್ತದೆ. ಇಲ್ಲಿಯವರೆಗೂ ಉಭಯ ಸ್ವಾಮಿಗಳ ಬೆಂಬಲಿಗರಿಂದ ಬಂದಿರುವ ಎಲ್ಲಾ ದೂರುಗಳ ಮೇಲೂ ಕಾನೂನು ಪ್ರಕಾರ ಕ್ರಮವನ್ನು ಸ್ಥಳೀಯ ಪೋಲೀಸರು ಜರುಗಿಸಿರುತ್ತಾರೆ. ೧೯೮೭ರ ಫೆಬ್ರುವರಿ ತಿಂಗಳಿನಲ್ಲಿ ಶ್ರೀ ಸಿದ್ಧಗಂಗಾ ಮಠದ ಜಾತ್ರೆಯು ಶಾಂತ ರೀತಿಯಿಂದ ಜರುಗಿತ್ತು,

ಪ್ರತಿ ವರ್ಷದಂತೆ ಈ ವರ್ಷವೂ ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯ ಜಾತ್ರೆ ಹಾಗೂ ದನಗಳ ಜಾತ್ರೆ ೭-೨-೮೮ ರಿಂದ ದಿನಾಂಕ ೧೨-೨-೮೮ರವರೆಗೆ ನಡೆಯಿತು. ಪ್ರತಿ